All India Radio: Bangalore
National Bulletins In Kannada
15.06.2025 / 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><*<><>*><>

ಮುಖ್ಯಾಂಶಗಳು

೧. ಸೈಪ್ರಸ್, ಕೆನಡಾ, ಕ್ರೋವೇಷಿಯಾ ರಾಷ್ಟ್ರಗಳಿಗೆ ಇಂದಿನಿಂದ ೫ ದಿನಗಳ ಕಾಲ ಪ್ರವಾಸ ಕೈಗೊಳ್ಳಲಿರುವ ಪ್ರಧಾನಿ ನರೇಂದ್ರ ಮೋದಿ

೨. ಕಳೆದ ಮಾರ್ಚ್ ವೇಳೆಗೆ ೫೦ ಗಿಗಾ ವ್ಯಾಟ್ ಪವನ ಶಕ್ತಿಯನ್ನು ಸಾಧಿಸುವಲ್ಲಿ ಭಾರತದ ಪ್ರಮುಖ ಮೈಲಿಗಲ್ಲನ್ನು ಬಿಂಬಿಸಲು ಇಂಧನ ಸಚಿವಾಲಯದಿಂದ ಬೆಂಗಳೂರಿನಲ್ಲಿಂದು ವಿಶೇಷ ಕಾರ್ಯಕ್ರಮ

೩. ಮಸ್ಕತ್‌ನಲ್ಲಿ ಇಂದು ನಡೆಯಬೇಕಿದ್ದ ಅಮೆರಿಕ ಮತ್ತು ಇರಾನ್ ನಡುವಿನ ಆರನೇ ಸುತ್ತಿನ ಪರಮಾಣು ಮಾತುಕತೆ ರದ್ದು

೪. ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್; ಏರ್ ರೈಫಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾರತದ ಆರ್ಯ ಬೋರ್ಸೆ ಮತ್ತು ಅರ್ಜುನ್ ಬಬುತಾ ಜೋಡಿಗೆ ಚಿನ್ನದ ಪದಕ

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು ಇಂದಿನಿಂದ ೫ ದಿನಗಳ ಕಾಲ ೩ ರಾಷ್ಟ್ರಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಭೇಟಿಯ ಮೊದಲ ಚರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲೈಡ್ಸ್ ಅವರ ಆಹ್ವಾನದ ಮೇರೆಗೆ ಇಂದು ಸೈಪ್ರಸ್ ಗೆ ಭೇಟಿ ನೀಡಲಿದ್ದಾರೆ. ಎರಡು ದಶಕಗಳಲ್ಲಿ ಭಾರತದ ಪ್ರಧಾನಿಯೊಬ್ಬರು ಸೈಪ್ರಸ್ ಗೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ಭೇಟಿಯ ಭಾಗವಾಗಿ ಅಲ್ಲಿನ ಅಧ್ಯಕ್ಷರೊಂದಿಗೆ ಪ್ರಧಾನಿ ಮಾತುಕತೆ ನಡೆಸಲಿದ್ದಾರೆ. ಲಿಮಾಸೊಲ್ ನಲ್ಲಿ ಉದ್ಯಮದ ನಾಯಕರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಭಾರತ ಮತ್ತು ಸೈಪ್ರಸ್ ರಾಷ್ಟ್ರಗಳ ನಡುವೆ ಬಾಂಧವ್ಯ ಬಲವರ್ಧನೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸುವ ನಿರೀಕ್ಷೆ ಇದೆ. ಪ್ರವಾಸದ ೨ನೇ ಚರಣದಲ್ಲಿ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರ ಆಹ್ವಾನದ ಮೇರೆಗೆ ಕನನಾಸ್ಕಿಸ್ ನಲ್ಲಿ ಇದೇ ೧೭ರಂದು ನಡೆಯಲಿರುವ ಜಿ-೭ ಶೃಂಗಸಭೆಯಲ್ಲಿ ಪ್ರಧಾನಿ ಪಾಲ್ಗೊಳ್ಳಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಸತತ ೬ನೇ ಜಿ-೭ ಶೃಂಗಸಭೆಯ ಭೇಟಿ ಇದಾಗಿದೆ. ಈ ವೇಳೆ ಜಿ-೭ ರಾಷ್ಟ್ರಗಳ ಹಲವು ನಾಯಕರೊಂದಿಗೆ ಜಾಗತಿಕ ವಿಷಯಗಳು ಇಂಧನ ಭದ್ರತೆ , ತಂತ್ರಜ್ಞಾನ, ಆವಿಷ್ಕಾರ ಹಾಗೂ ಕೃತಕ ಬುದ್ಧಿಮತ್ತೆ ಆಧಾರಿತ ವಿಷಯಗಳ ಕುರಿತಂತೆ ಸಮಾಲೋಚನೆ ನಡೆಸಲಿದ್ದಾರೆ. ಪ್ರವಾಸದ ಅಂತಿಮ ಚರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇದೇ ೧೮ರಂದು ಕ್ರೊಯೇಷಿಯಾಗೆ ಭೇಟಿ ನೀಡಲಿದ್ದಾರೆ. ಭಾರತದ ಪ್ರಧಾನಿಯೊಬ್ಬರು ಕ್ರೊಯೇಷಿಯಾಗೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ಈ ವೇಳೆ ಕ್ರೊಯೇಷಿಯಾದ ಪ್ರಧಾನಿ ಆಂಡ್ರೆಜ್ ಪ್ಲೆಂಕೋವಿಕ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಇದೇ ಸಂದರ್ಭದಲ್ಲಿ ಅಲ್ಲಿನ ಅಧ್ಯಕ್ಷ ಜೋರನ್ ಮಿಲನೋವಿಕ್ ಅವರನ್ನೂ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ.

ಈ ಕುರಿತು ಒಂದು ವರದಿ

ಪ್ರಧಾನ ಮಂತ್ರಿಯವರ ಮೂರು ರಾಷ್ಟ್ರಗಳ ಭೇಟಿಯು ಸೈಪ್ರಸ್‌ನಿಂದ ಆರಂಭವಾಗಲಿದ್ದು, ಎರಡು ದಶಕಗಳ ನಂತರ ಭಾರತೀಯ ಪ್ರಧಾನಿಯೊಬ್ಬರು ದ್ವೀಪ ರಾಷ್ಟ್ರಕ್ಕೆ ನೀಡುವ ಮೊದಲ ಭೇಟಿ ಇದಾಗಿದೆ. ಸೈಪ್ರಸ್ ಕಾಶ್ಮೀರ, ಗಡಿಯಾಚೆಗಿನ ಭಯೋತ್ಪಾದನೆ ಮತ್ತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿನ ಸುಧಾರಣೆಗಳ ಕುರಿತು ಭಾರತದ ನಿಲುವುಗಳನ್ನು ನಿರಂತರವಾಗಿ ಬೆಂಬಲಿಸುತ್ತಿರುವುದರಿಂದ ಈ ಭೇಟಿ ಮಹತ್ವದ್ದಾಗಿದೆ. ಸೈಪ್ರಸ್‌ನಿಂದ, ಪ್ರಧಾನ ಮಂತ್ರಿಗಳು ಉ೭ ಶೃಂಗಸಭೆಯಲ್ಲಿ ಭಾಗವಹಿಸಲು ಕೆನಡಾಕ್ಕೆ ಪ್ರಯಾಣಿಸಲಿದ್ದಾರೆ. ಶೃಂಗಸಭೆಯಲ್ಲಿ, ಮೋದಿ ಅವರು ಪ್ರಮುಖ ಜಾಗತಿಕ ಸಮಸ್ಯೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ ಮತ್ತು ಹಲವಾರು ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಪ್ರಧಾನ ಮಂತ್ರಿಯವರು ತಮ್ಮ ಭೇಟಿಯ ಅಂತಿಮ ಚರಣದಲ್ಲಿ ಕ್ರೊಯೇಷಿಯಾಕ್ಕೆ ತೆರಳಲಿದ್ದು, ಇದು ಭಾರತೀಯ ಪ್ರಧಾನಿಯೊಬ್ಬರು ದೇಶಕ್ಕೆ ನೀಡುತ್ತಿರುವ ಮೊದಲ ಉನ್ನತ ಮಟ್ಟದ ಭೇಟಿಯಾಗಿದೆ. ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್‌ನಲ್ಲಿ ಕ್ರೊಯೇಷಿಯಾವನ್ನು ಸಂಭಾವ್ಯ ಪಾಲುದಾರ ಎಂದು ಎದುರು ನೋಡಲಾಗುತ್ತಿದೆ ಮತ್ತು ಈ ಭೇಟಿ ಭಾರತ-ಕ್ರೊಯೇಷಿಯಾ ಸಂಬಂಧಗಳಲ್ಲಿ ಪ್ರಮುಖ ಮೈಲಿಗಲ್ಲನ್ನು ಪ್ರತಿನಿಧಿಸುತ್ತದೆ.

<><*<><>*><>

ಜಾಗತಿಕ ಪವನ ದಿನವನ್ನು ಇಂದು ಆಚರಿಸಲಾಗುತ್ತಿದೆ. ಶುದ್ಧ ಮತ್ತು ಸುಸ್ಥಿರ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಪವನ ಶಕ್ತಿಯ ಶಕ್ತಿಯನ್ನು ಆಚರಿಸಲು ಇಂದು ಜಾಗತಿಕವಾಗಿ ಭಾರತದಲ್ಲಿ ಇದರ ಆಚರಣೆಯ ಭಾಗವಾಗಿ, ಮಾರ್ಚ್ ೨೦೨೫ ರ ವೇಳೆಗೆ ೫೦ ಗಿಗಾ ವ್ಯಾಟ್ ಪವನ ಶಕ್ತಿಯನ್ನು ಸಾಧಿಸುವಲ್ಲಿ ಭಾರತದ ಪ್ರಮುಖ ಮೈಲಿಗಲ್ಲುಗಳನ್ನು ಬಿಂಬಿಸಲು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯವು ಇಂದು ಬೆಳಿಗ್ಗೆ ೯ ಗಂಟೆಯಿಂದ ಬೆಂಗಳೂರಿನಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದೆ. ಗ್ರಾಮೀಣಾಭಿವೃದ್ಧಿ, ಹಸಿರು ಉದ್ಯೋಗಗಳು ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವದಲ್ಲಿ ಪವನ ಶಕ್ತಿಯ ಪಾತ್ರವನ್ನು ಈ ಕಾರ್ಯಕ್ರಮವು ಪ್ರತಿಬಿಂಬಿಸಲಿದೆ. ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ, ರಾಜ್ಯ ಸಚಿವ ಶ್ರೀಪಾದ್ ಯೆಸ್ಸೊ ನಾಯಕ್ ಮತ್ತು ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

<><*<><>*><>

ಮಸ್ಕತ್‌ನಲ್ಲಿ ಇಂದು ನಡೆಯಬೇಕಿದ್ದ ಅಮೆರಿಕ ಮತ್ತು ಇರಾನ್ ನಡುವಿನ ಆರನೇ ಸುತ್ತಿನ ಪರಮಾಣು ಮಾತುಕತೆ ರದ್ದಾಗಿದೆ. ಇರಾನ್ ವಿರುದ್ಧ ಇಸ್ರೇಲ್ ನಡೆಸಿದ ವ್ಯಾಪಕ ವಾಯುದಾಳಿಯಲ್ಲಿ ಪರಮಾಣು ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಹಲವಾರು ಹಿರಿಯ ಕಮಾಂಡರ್‌ಗಳು ಮತ್ತು ವಿಜ್ಞಾನಿಗಳು ಸಾವನ್ನಪ್ಪಿದ ನಂತರ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿರುವ ಓಮನ್, ರದ್ದತಿಯನ್ನು ಘೋಷಿಸಿದೆ. ಇಸ್ರೇಲ್ ದಾಳಿ ಮತ್ತು ನಂತರದ ಇರಾನಿನ ಪ್ರತೀಕಾರದ ಹಿನ್ನೆಲೆಯಲ್ಲಿ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾದ ಕಾರಣ ಇರಾನ್‌ನ ಪರಮಾಣು ಕಾರ್ಯಕ್ರಮದ ಬಗ್ಗೆ ದೀರ್ಘಕಾಲದ ಕಳವಳಗಳನ್ನು ಪರಿಹರಿಸುವ ಗುರಿಯನ್ನು ಹೊಂದಿರುವ ಮಾತುಕತೆಗಳನ್ನು ರದ್ದುಗೊಳಿಸಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಒಮಾನಿ ವಿದೇಶಾಂಗ ಸಚಿವ ಬದ್ರ್ ಅಲ್ಬುಸೈದಿ, ಇಂದು ಮಸ್ಕತ್‌ನಲ್ಲಿ ನಡೆಯಬೇಕಿದ್ದ ಇರಾನ್-ಅಮೆರಿಕ ಮಾತುಕತೆಗಳು ನಡೆಯುವುದಿಲ್ಲ, ಆದರೆ ರಾಜತಾಂತ್ರಿಕತೆ ಮತ್ತು ಸಂವಾದವು ಶಾಶ್ವತ ಶಾಂತಿಗೆ ಏಕೈಕ ಮಾರ್ಗವಾಗಿದೆ ಎಂದು ಪುನರುಚ್ಚರಿಸಿದ್ದಾರೆ.

<><*<><>*><>

ಉತ್ತರ ಪ್ರದೇಶದ ಕುಶಿನಗರದಲ್ಲಿ ಇಸ್ರೋ ನಿನ್ನೆ ರಾಕೆಟ್ ಉಡಾವಣಾ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ, ಇದು ಉತ್ತರ ಪ್ರದೇಶದ ಮಣ್ಣಿನಿಂದ ರಾಕೆಟ್ ಮೂಲಕ ಮೊದಲ ಬಾರಿಗೆ ಪೇಲೋಡ್ ಅನ್ನು ಉಡಾಯಿಸಲಾಯಿತು. ಧ್ರುಸ್ಟ್ ಟೆಕ್ ಇಂಡಿಯಾ ಲಿಮಿಟೆಡ್ ಸಹಯೋಗದೊಂದಿಗೆ ನಡೆದ ಈ ಪರೀಕ್ಷೆಯು ಸಂಜೆ ೫ ಗಂಟೆ ೧೪ ನಿಮಿಷ ೩೩ ಸೆಕೆಂಡಿಗೆಕ್ಕೆ ರಾಕೆಟ್ ೧.೧ ಕಿ.ಮೀ. ಎತ್ತರಕ್ಕೆ ಹಾರುವ ಮೂಲಕ ಸಂಪೂರ್ಣ ಯಶಸ್ಸನ್ನು ಕಂಡಿತು. ಈ ಪರೀಕ್ಷೆಯು ಅಕ್ಟೋಬರ್-ನವೆಂಬರ್‌ನಲ್ಲಿ ನಡೆಯಲಿರುವ ದೊಡ್ಡ ಕಾರ್ಯಕ್ರಮಕ್ಕೆ ಮುನ್ನುಡಿಯಾಗಿದೆ . ಧ್ರುಸ್ಟ್ ಟೆಕ್ ಇಂಡಿಯಾದ ನಿರ್ದೇಶಕ ವಿನೋದ್ ಕುಮಾರ್ ಪರೀಕ್ಷಾ ಯಶಸ್ಸನ್ನು ದೃಢಪಡಿಸಿದ್ದಾರೆ, ಇಡೀ ಭಾರತದಾದ್ಯಂತ ಮಕ್ಕಳಲ್ಲಿ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಆಸಕ್ತಿ ಮೂಡಿಸಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಹೇಳಿದರು. ಡ್ರೋನ್‌ಗಳನ್ನು ಬಳಸಿಕೊಂಡು ಅಹಮದಾಬಾದ್‌ನಲ್ಲಿ ನಡೆದ ಹಿಂದಿನ ಪರೀಕ್ಷೆಗಳಿಗಿಂತ ಭಿನ್ನವಾಗಿ, ಉತ್ತರ ಪದೇಶದಲ್ಲಿ ರಾಕೆಟ್‌ನಿಂದ ನೇರವಾಗಿ ಉಪಗ್ರಹವನ್ನು ಉಡಾಯಿಸಲಾಯಿತು, ಇದು ಸಂಪೂರ್ಣವಾಗಿ ಯಶಸ್ವಿಯಾಗಿದೆ ಎಂದು ಇಸ್ರೋ ವಿಜ್ಞಾನಿ ಅಭಿಷೇಕ್ ಸಿಂಗ್ ಹೇಳಿದರು.

<><*<><>*><>

ಕೈಲಾಸ ಮಾನಸ ಸರೋವರ ಯಾತ್ರೆಗಾಗಿ ಮೊದಲ ಯಾತ್ರಾರ್ಥಿಗಳ ತಂಡ ಇಂದು ಸಿಕ್ಕಿಂನ ಗ್ಯಾಂಗ್ಟಾಕ್ ತಲುಪಲಿವೆ. ಸಿಕ್ಕಿಂ ಸರ್ಕಾರ ಅವರನ್ನು ಸ್ವಾಗತಿಸಲು ಎಲ್ಲಾ ವ್ಯವಸ್ಥೆಗಳನ್ನು ಮಾಡಿದೆ. ೫ ವರ್ಷಗಳ ನಂತರ ಈ ತಿಂಗಳ ೨೦ ರಂದು ಕೈಲಾಸ ಮಾನಸ ಸರೋವರ ಯಾತ್ರೆ ಪ್ರಾರಂಭವಾಗಲಿದೆ. ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಿ.ಎಸ್. ರಾವ್ ಅವರು ಸರ್ಕಾರಿ ಅಧಿಕಾರಿಗಳೊಂದಿಗೆ ೩೫ ಯಾತ್ರಿಗಳನ್ನು ಒಳಗೊಂಡ ಮೊದಲ ತಂಡ ಇಂದು ತಲುಪಲಿದೆ ಎಂದು ಹೇಳಿದರು. ತಂಡದವರು, ೧೫ ನೇ ಮೈಲಿ ಮತ್ತು ಶೆರಾಥಾಂಗ್‌ನಲ್ಲಿ ೪ ದಿನಗಳ ಕಾಲ ಹವಾಮಾನಕ್ಕೆ ಒಗ್ಗಿಕೊಳ್ಳಲು ತಂಗಲಿದ್ದಾರೆ. ಈ ಅವಧಿಯಲ್ಲಿ, ಹಿರಿಯ ರಕ್ಷಣಾ ಮತ್ತು ಸರ್ಕಾರಿ ಅಧಿಕಾರಿಗಳು ಅವರಿಗೆ ಮಾಹಿತಿ ನೀಡಲಿದ್ದಾರೆ. ಈ ತಿಂಗಳ ೨೦ ರಂದು, ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ನಾಥು ಲಾದಲ್ಲಿ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಯಾತ್ರೆಗೆ ಎಲ್ಲಾ ವೈದ್ಯಕೀಯ ಮತ್ತು ಇತರ ಅವಶ್ಯಕತೆಗಳನ್ನು ಪೂರೈಸಲಾಗುವುದು ಎಂದು ಅವರು ಹೇಳಿದರು. ಈ ಪ್ರಕ್ರಿಯೆಯಲ್ಲಿ ವಿವಿಧ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಸಂಸ್ಥೆಗಳು ಭಾಗಿಯಾಗಿವೆ. ಪ್ರತಿ ತಂಡವು ಯಾತ್ರೆಯನ್ನು ಪೂರ್ಣಗೊಳಿಸಲು ೧೧ ರಿಂದ ೧೨ ದಿನಗಳನ್ನು ತೆಗೆದುಕೊಳ್ಳುತ್ತದೆ. ಈ ವರ್ಷ ನಾಥುಲಾ ಮೂಲಕ ಕೈಲಾಸ ಮಾನಸ ಸರೋವರ ಯಾತ್ರೆಗೆ ಒಟ್ಟು ೧೦ ತಂಡಗಳು ತೆರಳಲಿವೆ.

<><*<><>*><>

ಅಮೆರಿಕ ಮೂಲದ ಆಕ್ಸಿಯಮ್ ಸ್ಪೇಸ್ ಇದೇ ೧೯ ರಂದು ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ಯಲು ಸಜ್ಜಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಸ್ಪಷ್ಟಪಡಿಸಿದೆ. ಜೂನ್ ೧೧ ರಂದು ಉಡಾವಣೆಯಾಗಬೇಕಿದ್ದ ಶುಕ್ಲಾ ಬಾಹ್ಯಾಕಾಶ ಯಾನವನ್ನು ಹಲವು ಬಾರಿ ಮುಂದೂಡಲಾಗಿತ್ತು, ಆದರೆ ಐಎಸ್‌ಎಸ್ ನ ಜ್ವೆಜ್ಡಾ ಮಾಡ್ಯೂಲ್‌ಗೆ ಸಂಬಂಧಿಸಿದ ತಾಂತ್ರಿಕ ಸಮಸ್ಯೆಗಳಿಂದಾಗಿ ೨ ಬಾರಿ ಮುಂದೂಡಲಾಗಿತ್ತು. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಜ್ವೆಜ್ಡಾ ಸೇವಾ ಮಾಡ್ಯೂಲ್‌ನಲ್ಲಿನ ಒತ್ತಡದ ಅಸಂಗತತೆಯನ್ನು ನಿರ್ಣಯಿಸಲು ಆಕ್ಸಿಯಮ್ ಸ್ಪೇಸ್ ನಾಸಾದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಇಸ್ರೋ ತಿಳಿಸಿದೆ.

<><*<><>*><>

ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತದಲ್ಲಿ ಮೃತಪಟ್ಟವರ ಡಿಎನ್‌ಎ ಹೊಂದಾಣಿಕೆ ಪ್ರಕ್ರಿಯೆ ನಡೆಯುತ್ತಿದ್ದು, ನಿನ್ನೆ ರಾತ್ರಿ ೯ ಗಂಟೆಯವರೆಗೆ ೧೯ ಡಿಎನ್‌ಎ ಮಾದರಿಗಳನ್ನು ಪತ್ತೆಹಚ್ಚಲಾಗಿದೆ ಎಂದು ಗುಜರಾತ್ ಗೃಹ ಖಾತೆ ರಾಜ್ಯ ಸಚಿವ ಹರ್ಷ ಸಾಂಘ್ವಿ ಹೇಳಿದ್ದಾರೆ.

ಇನ್ನೂ ಹೆಚ್ಚಿನ ಡಿಎನ್‌ಎ ಮಾದರಿಗಳನ್ನು ಹೊಂದಿಸಲು ವಿಧಿವಿಜ್ಞಾನ ತಂಡಗಳು ರಾತ್ರಿಯಿಡೀ ಕಾರ್ಯ ನಿರ್ವಹಿಸುತ್ತಿವೆ. ವಿಮಾನ ದುರಂತದಲ್ಲಿ ಮೃತಪಟ್ಟ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರ ಅಂತ್ಯಕ್ರಿಯೆಯನ್ನು ರಾಜ್‌ಕೋಟ್‌ನಲ್ಲಿ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ. ಏತನ್ಮಧ್ಯೆ, ಮೃತರ ಕುಟುಂಬಗಳಿಗೆ ಅನುಕೂಲವಾಗುವಂತೆ ಸಿವಿಲ್ ಆಸ್ಪತ್ರೆಯಲ್ಲಿ ವ್ಯವಸ್ಥೆಗಳನ್ನು ಮಾಡಲಾಗಿದೆ. ಅಹಮದಾಬಾದ್ ಸಿವಿಲ್ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಡಾ.ರಾಕೇಶ್ ಜೋಶಿ ಮಾತನಾಡಿ, ಪ್ರತಿಯೊಬ್ಬ ಗಾಯಾಳುವಿಗೂ ಪ್ರತ್ಯೇಕ ತಂಡವನ್ನು ನಿಗದಿಪಡಿಸಲಾಗಿದ್ದು, ಉಚಿತ ಆಂಬ್ಯುಲೆನ್ಸ್ ಸೇವೆಯನ್ನೂ ಸಹ ಒದಗಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

<><*<><>*><>

ಜೂನ್ ೧೨ ರಂದು ಅಹಮದಾಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನ ಎಐ -೧೭೧ ರ ದುರಂತ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ವಿಮಾ ಪರಿಹಾರ ಇತ್ಯರ್ಥ ಪ್ರಕ್ರಿಯೆಯನ್ನು ಸರಳೀಕರಿಸಲು ಮತ್ತು ವೇಗಗೊಳಿಸಲು ಎಸ್‌ಬಿಐ ಜೀವ ವಿಮೆ ಇಂದು ಹಲವು ಕ್ರಮಗಳನ್ನು ಪ್ರಕಟಿಸಿದೆ. ಕುಟುಂಬಗಳು ಅನುಭವಿಸುತ್ತಿರುವ ಭಾವನಾತ್ಮಕ ಆಘಾತವನ್ನು ಅರ್ಥಮಾಡಿಕೊಂಡು, ಜೀವ ವಿಮಾ ಪರಿಹಾರಗಳನ್ನು ಪ್ರಕ್ರಿಯೆಗೊಳಿಸಲು ಔಪಚಾರಿಕ ಮರಣ ಪ್ರಮಾಣಪತ್ರವನ್ನು ಒತ್ತಾಯಿಸದಿರಲು ನಿರ್ಧರಿಸಿದೆ ಎಂದು ಸಂಸ್ಥೆ ತಿಳಿಸಿದೆ. ಬದಲಾಗಿ, ಎಸ್‌ಬಿಐ ಲೈಫ್, ಅಧಿಕೃತ ಸರ್ಕಾರಿ ದಾಖಲೆಗಳು, ಪುರಸಭೆಯ ಪೋರ್ಟಲ್‌ಗಳಿಂದ ನಮೂದುಗಳು ಅಥವಾ ಇ-ಆಡಳಿತ ಮಾಹಿತಿಯನ್ನು ಸಾವಿನ ಮಾನ್ಯ ಪುರಾವೆಯಾಗಿ ಸ್ವೀಕರಿಸುತ್ತದೆ. ವಿಮಾ ಪರಿಹಾರ ಅರ್ಜಿ, ದಾಖಲೆಗಳು, ಕೆವೈಸಿ ಮತ್ತು ನಾಮಿನಿಯ ಬ್ಯಾಂಕ್ ಖಾತೆ ವಿವರಗಳಂತಹ ಕೆಲವು ಮೂಲಭೂತ ದಾಖಲೆಗಳೊಂದಿಗೆ ಪರಿಹಾರ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು.

<><*<><>*><>

ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನವನ್ನು ಇಂದು ಜಾಗತಿಕವಾಗಿ ಆಚರಿಸಲಾಗುತ್ತಿದೆ. ಹಿರಿಯರ ಮೇಲಿನ ದೌರ್ಜನ್ಯ ಮತ್ತು ನಿರ್ಲಕ್ಷ್ಯದ ಮೇಲೆ ಪರಿಣಾಮ ಬೀರುವ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ಜನಸಂಖ್ಯಾ ಪ್ರಕ್ರಿಯೆಗಳ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ವೃದ್ಧರ ಮೇಲಿನ ದೌರ್ಜನ್ಯ ಮತ್ತು ನಿರ್ಲಕ್ಷ್ಯದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಉತ್ತೇಜಿಸಲು ಪ್ರಪಂಚದಾದ್ಯಂತದ ಎಲ್ಲಾ ಸಮುದಾಯಗಳಿಗೆ ಈ ದಿನವು ಅವಕಾಶವನ್ನು ಒದಗಿಸುತ್ತದೆ. ಈ ವರ್ಷದ ಘೋಷ ವಾಕ್ಯ - "ದೀರ್ಘಾವಧಿಯ ಆರೈಕೆ ಸೌಲಭ್ಯಗಳಲ್ಲಿ ಹಿರಿಯರ ಮೇಲಿನ ದೌರ್ಜನ್ಯವನ್ನು ಪರಿಹರಿಸುವುದು: ಡೇಟಾ ಮತ್ತು ಕ್ರಿಯೆಯ ಮೂಲಕ" ಎಂಬುದಾಗಿದೆ. ಈ ಘೋಷ ವಾಕ್ಯವು ದೀರ್ಘಕಾಲೀನ ಆರೈಕೆ ಸೌಲಭ್ಯಗಳಲ್ಲಿ ಹಿರಿಯರ ಮೇಲಿನ ದೌರ್ಜನ್ಯದ ಮೇಲೆ ಕೇಂದ್ರೀಕರಿಸುತ್ತದೆ.

<><*<><>*><>

ಜರ್ಮನಿಯ ಮ್ಯೂನಿಚ್‌ನಲ್ಲಿ ನಡೆದ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ ೧೦ ಮೀಟರ್ ಏರ್ ರೈಫಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾರತದ ಆರ್ಯ ಬೋರ್ಸೆ ಮತ್ತು ಅರ್ಜುನ್ ಬಬುತಾ ಜೋಡಿ ಚಿನ್ನದ ಪದಕ ಗೆದ್ದಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>